	Government on Bhima Project from 1990 to 1992 - year-wise break up	1990-91 1990-92 1991-93	Rs. 320.00 lakhs Rs. 430.00 lakhs Rs. 108.00 lakhs
6.	The amount spent by previous Governments	1987-88 1988-89	Rs. 33.00 lakhs Rs. 71.00 lakhs
7.	The date of commissioning of the Bhima Project	Clarified water by December 1992 and filtered water by June 1993.	
8.	Total capacity	11 M.G.D. (I Stage – 6 M.G.D.)	

We are trying our best. Shri. Qumarul Islam also knows it. He came with us and he has visited all the spots. He has seen the work but still he has put so many questions and my answer is that this Government is sincerely working and we are making all efforts. I must also be thankful to the Railway Minister Shri Jaffer Shriff. He has also promotly responded to our request for supplying water through Wagons. 120 wagons came yesterday, day before yesterday 80 Wagons came. Every day we are also in touch with them. ಪ್ರತಿಯೊಂದನ್ನು ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ಅವರು ಈಗಲಾದರೂ ಸಂತೋಷಪಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

Sri. QUMARAL ISLAM : High speed rings should be used and in borewells, there is no water.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಅರ್ಬನ್ ವಾಟರ್ ಸಪ್ಲೈ ಬೋರ್ಡಿನ ಎಂ.ಡಿ. ಅವರಿಗೂ, ನಮ್ಮ ಡೆಪ್ಯುಟಿ ಕಮೀಷನರ್‌ರವರಿಗೂ ಹಣವನ್ನು ಕೊಟ್ಟಿದ್ದೇವೆ. ಹೈ ಸ್ಪೀಡ್ ರಿಗ್‌ಗಳು ನಮ್ಮ ಗೌರ್ನಮೆಂಟ್‌ನಲ್ಲಿ ಇಲ್ಲದಿದ್ದರೆ ಬೇರೆ ಎಲ್ಲಿಂದಲಾದರೂ ತೆಗೆದುಕೊಳ್ಳಬೇಕೆಂದು ಹಣವನ್ನು ಕೊಟ್ಟಿದ್ದೇವೆ. They can get it on hire and do it. We have given free hand and there is no restriction. Depending upon the situation, he should act. That free hand, we have given and you know it. Even in Rural Development Department also nearly 12 High speed rigs we are purchasing from Ingersol Rand out of that also wherever distress districts are there, there we will send.

ವಿಷಯ : ಫೇರ್‌ಗ್ರೋಥ್ ಫೈನಾನ್ಸಿಷಲ್ ಸರ್ವೀಸಸ್ ಬಗ್ಗೆ :

ಶ್ರೀ ಸಿ. ಬೈರೇಗೌಡ : (ವೇಮಗಲ್) ಮಾನ್ಯ ಉಪಾಧ್ಯಕ್ಷೆಣಿಯವರೇ, ನಾನು ಬೆಳಿಗ್ಗೆ ಅಧ್ಯಕ್ಷರ ಹತ್ತಿರ ಈ ಬಗ್ಗೆ ಮಾತನಾಡಿ ಬರವಣಿಗೆಯಲ್ಲಿಯೂ ಕೂಡ ಕಳುಹಿಸಿದ್ದೇನೆ. ಅದರಲ್ಲಿ ನಾನು, ಮಾನ್ಯ ವೈ.ಕೆ. ರಾಮಯ್ಯ ಹಾಗೂ ಚಂದ್ರೇಗೌಡರು ರುಜು ಮಾಡಿ ಕಳುಹಿಸಿದ್ದೇವೆ. ಅದು ನಿಯಮಾವಳಿ 68ರ ಪ್ರಕಾರ ಚರ್ಚೆ ಮಾಡಬೇಕು ಎನ್ನತಕ್ಕಂಥಾದ್ದು. ವಿಷಯ ಏನೆಂದರೆ, ದೇಶದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಸೆಕ್ಯೂರಿಟಿ ಹಗರಣ ನಡೆದಿದೆ. ನನ್ನ ಲೆಕ್ಕದಲ್ಲಿ ಹೇಳುವುದಾದರೆ ಸುಮಾರು 20 ಸಾವಿರ ಕೋಟಿ ರೂಪಾಯಿಗಳಷ್ಟು ಸಾರ್ವಜನಿಕರ ಹಣ ಇವೊತ್ತು ನಾಪತ್ತೆಯಾಗಿದೆ. ಸರ್ಕಾರ ತನ್ನ ಲೆಕ್ಕದ ಪ್ರಕಾರ ಮೂರೂವರೆ ಸಾವಿರ ಕೋಟಿ ರೂಪಾಯಿಗಳೆಂದು ಹೇಳುತ್ತಿದೆ. ಆದರೆ, ಪತ್ರಿಕೆಗಳಲ್ಲಿ ಬಂದಿರುವ ವರದಿ ಪ್ರಕಾರ ಸುಮಾರು 16–17 ಸಾವಿರ ಕೋಟಿ ರೂಪಾಯಿಗಳು ಎಂಬ ಮಾತನ್ನು

ಹೇಳಿದ್ದಾರೆ. ಇಂತಹ ಒಂದು ದೊಡ್ಡ ಹಗರಣದಲ್ಲಿ ನಮ್ಮ ಬೆಂಗಳೂರು ಕೂಡ ಹಿಂದುಳಿದಿಲ್ಲ. ಬೆಂಗಳೂರಿನಲ್ಲಿರತಕ್ಕಂಥ ಫೇರ್ ಗ್ರೋಥ್ ಫೈನಾನ್ಸಿಯಲ್ ಸರ್ವೀಸಸ್ ಎನ್ನತಕ್ಕಂಥ ಕಂಪೆನಿಯಲ್ಲೂ ಸಹ ಸಾವಿರಾರು ರೂಪಾಯಿಗಳ ದುರ್ವ್ಯವಹಾರ ನಡೆದಿದೆ.

ಉಪಾಧ್ಯಕ್ಷಿಣಿಯವರು : ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕಂಥ ವಿಚಾರ.

ಶ್ರೀ ಸಿ. ಬೈರೇಗೌಡ : ಇದರಲ್ಲಿ ರಾಜ್ಯ ಸರ್ಕಾರದ ಸಂಬಂಧ ಯಾವ ರೀತಿ ಇದೆ ಎನ್ನತಕ್ಕಂಥಾದ್ದನ್ನು ನಾನು ಹೇಳುತ್ತೇನೆ. ಇದರ ಬಗ್ಗೆ ಸಿಬಿಐ ವಿಚಾರಣೆ ನಡೆದಿದೆ. ನಾನು ಅದನ್ನು ಪ್ರಸ್ತಾಪ ಮಾಡುತ್ತಿಲ್ಲ. ಈಗ ಕೇಂದ್ರದಲ್ಲಿ, ಪ್ರಧಾನ ಮಂತ್ರಿಗಳಾಗಿರತಕ್ಕಂಥವರು ಏನು ಹೇಳಿದ್ದಾರೆಂದರೆ, ಕೇಂದ್ರ ಸರ್ಕಾರದಲ್ಲಿರತಕ್ಕಂಥ ಮಂತ್ರಿಗಳು ಯಾರಾದರು ಇಂತಹ ಕಂಪೆನಿಗಳಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದರೆ ಅವರು ತಿಳಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಉಪಾಧ್ಯಕ್ಷಿಣಿಯವರು : ಈಗ ಅಜೆಂಡಾ ಪ್ರಕಾರ ಹೋಗೋಣ. ಏಕೆಂದರೆ, ಇನ್ನು ಹಲವಾರು ವಿಷಯಗಳಿರುವುದರಿಂದ ಮೊದಲು ಅವುಗಳನ್ನು ಮುಗಿಸಬೇಕಾಗುತ್ತದೆ. ಆನಂತರ, ಇದನ್ನು ಮತ್ತೆ ನೋಡಿ ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ : ಇದರ ಬಗ್ಗೆ ಸ್ವಲ್ಪವೇ ಹೇಳಿ ನಾನು ಮುಗಿಸಿಬಿಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಬೈರೇಗೌಡರೇ, ನಾನು ಇಂಟರ್‌ವಿನ್ ಮಾಡುತ್ತಿದ್ದೇನೆ. ಈ ಸೆಕ್ಯೂರಿಟಿ ಸ್ಕ್ಯಾಮ್ ಏನಿದೆ, ಇದೆಲ್ಲಾ ನಮಗೆ ಸಂಬಂಧಪಡುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಹಾಲು ಉತ್ಪಾದಕರು ರಾಜ್ಯಾದ್ಯಂತ ಇದ್ದಾರೆ. ಈ ವಿಷಯವಾಗಿ ತಾವು ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಉಪಾಧ್ಯಕ್ಷಿಣಿಯವರು : ಈಗ ವಿತ್ತೀಯ ಕಾರ್ಯಕಲಾಪಗಳನ್ನು ಮೊದಲು ಮುಗಿಸೋಣ. ಏಕೆಂದರೆ, ಇದು ಮೇಲ್ಮನೆಗೆ ಹೋಗಬೇಕಾಗುತ್ತದೆ. ಆ ವಿಷಯವನ್ನು ನಂತರ ತೆಗೆದುಕೊಳ್ಳೋಣ.

ವಿತೀಯ ಕಾರ್ಯಕಲಾಪಗಳು

1992–1993ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆಗಳ ಬಗ್ಗೆ ಚರ್ಚೆ

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) ಹೌದು ಈಗ ಮನೆಯಲ್ಲಿ ಪಾಸಾದ ನಂತರ, ಆ ಮನೆಗೆ ಮತ್ತೆ ಹೋಗಿ ಪಾಸಾಗಬೇಕು. ಇದು ಪಾಸಾಗಿ ಬರಲಿ ಎಂದು ಅಲ್ಲಿ ಕೂಡ ಕಾಯುತ್ತಿದ್ದಾರೆ. ನಾನು ಅಲ್ಲಿಗೆ ಬಂದೆ. ಈ ವಿಷಯ ಮುಗಿದ ನಂತರ ನಿಮ್ಮ ಬೇರೆ ವಿಷಯ ಏನಿದೆ. ಆಗ ಉಪಾಧ್ಯಕ್ಷಿಣಿಯವರು ಅನುಮತಿ ಕೊಡುತ್ತಾರೆ, ಆಗ ತಾವು ಪ್ರಸ್ತಾಪ ಮಾಡಬಹುದು. ಯಾರೂ ಬೇಡ ಎಂದು ಹೇಳುವುದಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ತಮ್ಮ ಗಮನಕ್ಕೆ ತರತಕ್ಕಂಥಾದ್ದು ಏನೆಂದರೆ, ದಯಮಾಡಿ ತಾವು ರೆಕಾರ್ಡ್ ತರಿಸಿ ನೋಡಿ. ಈ ಬಿಲ್ ಈ ಸದನದಲ್ಲಿ ಇನ್ನೂ ಇಂಟ್ರಡ್ಯೂಸ್ ಆಗಿಲ್ಲ. ಏನಾಗಿದೆಯೆಂದು ತಿಳಿದುಕೊಳ್ಳುವುದಕ್ಕೆ ರೆಕಾರ್ಡ್ ತೆಗೆದು ನೋಡಿ. ಮುಖ್ಯಮಂತ್ರಿಗಳು ಇದನ್ನು ಮಂಡಿಸಿಲ್ಲ. ಬೇಕಾದರೆ ತಾವು ರೆಕಾರ್ಡ್ ತೆಗೆದು ನೋಡಿ, ಆಗ ಗೊತ್ತಾಗುತ್ತದೆ. ನಾವು ಅದನ್ನು ಬಹಳ ಕ್ಲೀನಾಗಿ ಅಬ್ಸರ್ವ್ ಮಾಡುತ್ತಿದ್ದೇವೆ. ಕಾನೂನು ರೀತ್ಯ ಇದು ಇನ್ನೂ ಮಂಡನೆಯಾಗಿಲ್ಲ. ಈಗ ನಮ್ಮ ಕೈಗೆ ಕೊಟ್ಟಿದ್ದು; ಇದರ ಪರವಾಗಿ ನೀವು ಕೈ ಎತ್ತಿ ಎಂದರೆ ಇದು ಸಾಧ್ಯವಿಲ್ಲದಿರತಕ್ಕದ್ದು. ನಾನು ನೋಡಿದೆ : ಎಂತೆಂಥಹ ವಿಚಾರಗಳು ಇಲ್ಲಿ ಬಂದಿವೆಯೆಂದರೆ ಸ್ಟೇಟ್ ಎಕ್ಸೈಸ್ ಬಗ್ಗೆ ಮತ್ತು ಅನೇಕ ವಿಚಾರಗಳೂ ಕೂಡ ಇವೆ. ಎಕ್ಸೈಸ್‌ನಲ್ಲಿ ಇವರು ರೆಕ್ಟಿಫೈಡ್ ಸ್ಪಿರಿಟ್ ಏನು ಕೊಡುತ್ತಾರೆ, ಅದನ್ನು ಕೊಡತಕ್ಕಂಥ ವಿಚಾರದಲ್ಲಿ ಅವರಿಗೆ ಎಂಟು ಕೋಟಿ ರೂಪಾಯಿಗಳನ್ನು ಕೊಡಬೇಕು ಎನ್ನತಕ್ಕಂಥ ವಿಚಾರವನ್ನು ಇದರಲ್ಲಿ ಹೇಳಿದ್ದಾರೆ. ಮತ್ತು ಹಣವನ್ನು ಕೊಡಬೇಕಾಗಿ ಬಂತು ಎನ್ನತಕ್ಕಂಥ ವಿಚಾರಗಳಲ್ಲದೆ ಇನ್ನು ಬಹಳ ದೊಡ್ಡ ದೊಡ್ಡ ವಿಚಾರಗಳಿವೆ. ಈಗ ಇಲ್ಲಿ ಇದನ್ನು ನಮ್ಮ ಕೈಗೆ ಕೊಟ್ಟಿದ್ದೀರಿ. ನಮ್ಮ ಹಳ್ಳಿ ಕಡೆ ಒಂದು ಗಾದೆ ಇದೆ : ಏನೆಂದರೆ